**<u>ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ. 134/2023**

| | | | |
|---|---|---|---|
| **ಹೆಸರು** | **:** | **ಸಿದ್ದಾರೂಡ** | **ಚಾಸಾ. 5** |
| **ತಂದೆಯ ಹೆಸರು** | **:** | **ಬಸಪ್ಪ** | **ಪ್ರಾ.ಸಾ. 3** |
| **ವಯಸ್ಸು** | **:** | **27 ವರ್ಷ** | **ದಿನಾಂಕಃ 07-08-2024** |
| **ಉದ್ಯೋಗ** | **:** | ಅಬಕಾರಿ ಪೇದೆ | |
| **ವಾಸಸ್ಥಳ** | **:** | **ಚಿಂಚೋಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ದಿನಾಂಕಃ 03-01-2020 ರಿಂದ ಇಲ್ಲಿಯರವರೆಗೆ ಅಬಕಾರಿ ಪೇದೆಯಾಗಿ ಚಿಂಚೋಳಿಯಲ್ಲಿ ಎಂದು ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 12-04-2022 ರಂದು ನಾನು ಕಚೇರಿಯಲ್ಲಿದ್ದಾಗ ಹೆಚ ಹೊಸಳ್ಳಿ ಗ್ರಾಮದಲ್ಲಿ ಚಹಾ ಹೋಟೆಲನಲ್ಲಿ ಯಾರೋ ಒಬ್ಬ ವ್ಯಕ್ತಿ ಅಕ್ರಮವಾಗಿ ಮದ್ಯಮಾರಾಟ ಮಾಡುತ್ತಿದ್ದಾರೆ ಎಂದು ಖಚಿತ ಭಾತ್ಮಿ ಬಂದಿದೆ ಎಂದು ಚಾಸಾ-1 ರವರು ನನಗೆ ತಿಳಿಸಿದ್ದು, ಆದ್ದರಿಂದ ನಾನು ಚಾಸಾ-1 ಹಾಗೂ ಸಿಬ್ಬಂದಿಯಾದ ಚಾಸಾ-4 ಮತ್ತು 6 ರವರು ಸೇರಿ ಕಚೇರಿಯ ವಾಹನ ಸಂಖ್ಯೆಃ KA 32 G 1202 ನೇದ್ದರಲ್ಲಿ ಭಾತ್ಮಿ ಸ್ಥಳಕ್ಕೆ ಹೋಗಿ ಅಲ್ಲಿ ಚಹಾ ಕುಡಿಯುತ್ತಾ ಕುಳಿತಿದ್ದು ಪ್ರಾಸಾ 1 ಮತ್ತು 2 ರವರಿಗೆ ಪಸಿಂಚರಾಗಲು ಕೋರಿಕೊಂಡು ಅವರ ಜೊತೆ ಭಾತ್ಮಿ ಬಂದ ಚಹಾ ಅಂಗಡಿಯ ಮೇಲೆ ದಾಳಿ ಮಾಡಿರುತ್ತೇವೆ. ನಂತರ ಪಂಚರ ಸಮಕ್ಷಮ ಹೋಟೆಲನ್ನು ಶೋಧನೆ ಮಾಡುವ ಮೊದಲು ಶೋಧನಾ ಪತ್ರ ತಯಾರಿಸಿ ಶೋಧನೆ ಮಾಡಿದಾಗ ಒಂದು ಮೂಲೆಯಲ್ಲಿ 90 ML ಅಳತೆಯ 90 Original Choice ವಿಸ್ಕಿ ಪ್ಯಾಕೆಟುಗಳು, 330 ML ಅಳತೆಯ 31 Kingfisher Beer ಬಾಟಲಿಗಳು ಹಾಗೂ 180 ML ಅಳತೆಯ 24 ಒಟಿ ಪ್ಯಾಕೆಟುಗಳು ಸಿಕ್ಕಿರುತ್ತವೆ. ನಂತರ ಸಿಕ್ಕ ವಸ್ತುಗಳನ್ನು ಜಪ್ತಿ ಮಾಡಿ ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಅವುಗಳಲ್ಲಿ 90 ML ಅಳತೆಯ 20 Original Choice ವಿಸ್ಕಿ ಪ್ಯಾಕೆಟುಗಳು, 330 ML ಅಳತೆಯ 1 Kingfisher Beer ಬಾಟಲಿ ಹಾಗೂ 180 ML ಅಳತೆಯ 10 ಒಟಿ ಪ್ಯಾಕೆಟುಗಳನ್ನು ಪ್ರತ್ಯೇಕವಾಗಿ ಸೀಲ ಮಾಡಿ ಪಂಚರ ಸಮಕ್ಷಮ ಜಪ್ತಿ ಪಂಚನಾಮೆಯನ್ನು ಜರುಗಿಸಿ ಪಂಚರ ಸಹಿಗಳನ್ನು ಪಡೆದಿದ್ದೇವೆ.

ನಾವು ಅಲ್ಲಿದ್ದ ವ್ಯಕ್ತಿಗೆ ಕೇಳಿದಾಗ ತನ್ನ ಹತ್ತಿರ ಮದ್ಯಪಾನ ಮಾರಾಟ ಮಾಡುವ ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತಾನೆ. ಸದರಿ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯಾಗಿರುತ್ತಾನೆ.

ಮರಳಿ ಠಾಣೆಗೆ ಬಂದು ಘಟನೆ ಬಗ್ಗೆ ನಾನು ಚಾಸಾ-4 ಮತ್ತು 6 ರವರು ಹೇಳಿಕೆಗಳನ್ನು ನೀಡಿರುತ್ತೇವೆ. ಜಪ್ತಿ ಮಾಡಿದ ಮುದ್ದೆಮಾಲುಗಳಲ್ಲಿ ಈಗ ನೋಡುತ್ತಿರುವ 90 ML ಅಳತೆಯ 20 Original Choice ವಿಸ್ಕಿ ಪ್ಯಾಕೆಟುಗಳು, 330 ML ಅಳತೆಯ 1 Kingfisher Beer ಬಾಟಲಿ ಹಾಗೂ 180 ML ಅಳತೆಯ 10 ಒಟಿ ಪ್ಯಾಕೆಟುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟುಗೂಡಿಸಿ ಮು.ಮಾ. 1 ರಿಂದ 3 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎಸ್.ಸಿ.ಹೆಚ. ವಕೀಲರಿಂದಃ</u>

ನಮ್ಮ ಕಚೇರಿಯಿಂದ ಬೆಳಿಗ್ಗೆ 11 ಗಂಟೆಗೆ ಹೋರಟಿರುತ್ತೇವೆ. ಚಿಂಚೋಳಿಂದ ಹೂಸಳ್ಳಿ 27 ರಿಂದ 28 ಕಿ.ಮಿ. ಎಂದರೆ ಸರಿ.  ಸಾಮಾನ್ಯವಾಗಿ ಚಿಂಚೋಳಿಯಿಂದ ಹೊಸಳ್ಳಿಗೆ ಗ್ರಾಮಕ್ಕೆ ಹೋಗಲು 1 ರಿಂದ 1.5 ಗಂಟೆ ಬೇಕಾಗುತ್ತದೆ ಎಂದರೆ ಅಷ್ಟೂಂದು ಆಗುವುದಿಲ್ಲ ಎಂದು ನುಡಿಯುತ್ತಾರೆ. ಚಿಂಚೋಳಿಯಿಂದ ಹೊಸಳ್ಳಿಗೆ ಹೋಗಲು ಅರ್ಧಗಂಟೆ ಬೇಕಾಗುತ್ತದೆ. ನನ್ನ ಹೇಳಿಕೆಯನ್ನು ಮೌಖಿಕವಾಗಿ ನೀಡಿದ್ದೇನೆ. ನನ್ನ ಹೇಳಿಕೆಯಲ್ಲಿ ಅರ್ಧಗಂಟೆ ಒಳಗೆ ಹೊಸಳ್ಳಿಗೆ ಹೋಗಿದ್ದೇವೆ ಎಂದು ಉಲ್ಲೇಖವಿಲ್ಲ. ಚಿಂಚೋಳಿಯಿಂದ ಹೊಸಳ್ಳಿಗೆ ಗ್ರಾಮಕ್ಕೆ ಹೋಗಲು ಕನಿಷ್ಠ 45 ನಿಮಿಷ  ಬೇಕಾಗುತ್ತದೆ ಎಂದರೆ ಸರಿ. ನನ್ನ ಹೇಳಿಕೆಯ ಪ್ರಕಾರ 20 ನಿಮಿಷದಲ್ಲಿ ಚಿಂಚೋಳಿಯಿಂದ ಹೊಸಳ್ಳಿಗೆ ಹೋಗಿರುವ ಬಗ್ಗೆ ಉಲ್ಲೇಖವಿದೆ ಎಂದರೆ ಸಾಕ್ಷಿ ನಾನು 30 ನಿಮಿಷದಲ್ಲಿ ಹೋಗಿದ್ದೇವೆ ಎಂದು ಹೇಳಿದ್ದೇನೆ ಎಂದು ನುಡಿಯುತ್ತಾರೆ. ಅವರು ಹೇಗೆ ಹೇಳಿಕೆಯಲ್ಲಿ ಬರೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಹೇಳಿಕೆಯನ್ನು ನನಗೆ ಓದಿ ಹೇಳಿಲ್ಲ. ಹೋಟೆಲಿನ ಚೆಕ್ಕುಬಂದಿ ನನಗೆ ಹೇಳಲು ಬರವುದಿಲ್ಲ. ಹೋಟೆಲಿಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ನಾನು ನೋಡಿಲ್ಲ. ನಾವು ಹಾೋಗಿರುವ ಸ್ಥಳದಲ್ಲಿ ಹೋಟೆಲ ಇಲ್ಲ ಎಂದರೆ ಸರಿಯಲ್ಲ. ಪ್ರಾಸಾ 1 ಮತ್ತು 2 ರವರ ಬೇರೊಂದು ಹೋಟೆಲನಲ್ಲ್ಲಿ ಇದ್ದರು. ಸದರಿ ಬೇರೆಹೋಟೆಲ ಯಾರಿಗೆ ಸೇರಿದ್ದು ಎಂದು ನನಗೆ ಹೇಳಲು ಬರುವುದಿಲ್ಲ. ಪ್ರಾಸಾ 1 ಮತ್ತು 2 ರವರಿಗೆ ಪಂಚರಾಗಲು ಯಾರು ಕೇಳಿದ್ದರು ಎಂದು ನನಗೆ ನೆನಪಿಲ್ಲ. ಆರೊಪಿಗೆ ಸಂಬಂಧಪಟ್ಟಂತೆ ಹೊಸಳ್ಳಿಯಲ್ಲಿ ಅಸ್ತಿ ಇರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಪ್ರತಿಯೊಂದು ಮುದ್ದೆಮಾಲಿನ ಮೇಲೆ ಜಪ್ತಿ ಮಾಡಿರುವ ಬಗ್ಗೆ ಗುರುತು ಮಾಡಿಲ್ಲ. ಸಾಕ್ಷಿ ಮುಂದುವರೆದು ಬಟ್ಟೆಯಲ್ಲಿ ಸುತ್ತಿ ಸೀಲ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಮು.ಮಾ. 1 ರಿಂದ 3 ತರಹದ ಮುದ್ದೆಮಾಲು ಸಾಕಷ್ಟು ಸಿಗುತ್ತವೆ ಎಂದರೆ ಸರಿ. ಮು.ಮಾ. 1 ರಿಂದ 3 ಆರೋಪಿಯ ಕಬ್ಜೆಯಲ್ಲಿದ್ದವು ಎಂದು ತೋರಿಸಲು ಅವುಗಳ ಮೇಲೆ ಯಾವುದೇ ಗುರುತು ಇಲ್ಲ ಎಂದರೆ ಸರಿ.

ಶೋಧನಾ ಪ್ರಮಾಣ ಪತ್ರ ತಯಾರಿಸುವ ಸಮಯಕ್ಕೆ ನನ್ನ ಸಿಬ್ಬಂದಿಯವರು ಇದ್ದರು. ಸ್ಥಳದಲ್ಲಿ 10 ರಿಂದ 12 ಜನ ಸಾರ್ವಜನಿಕರು ಸೇರಿದ್ದರು. ಅಲ್ಲಿದ್ದ ಸಾರ್ವಜನಿಕರ ಹೆಸರು ಮತ್ತು ವಿಳಾಸ ಪಡೆಯಲು ನಾವು

ಪ್ರಯತ್ನ ಪಟ್ಟಿಲ್ಲ. ಆ ದಿನ 11-30 ರಿಂದ 12-30 ರವರೆಗೆ ಸ್ಥಳದಲ್ಲಿ ಪಂಚನಾಮೆ, ಶೋಧನಾ ಪ್ರಮಾಣ ಪತ್ರ ತಯಾರಿಸಲು ಸಮಯವಾಗಿದೆ. ಸದರಿ ಪಂಚನಾಮೆ ಮತ್ತು ಶೋಧನಾ ಪ್ರಮಾಣ ಪತ್ರವನ್ನು ಚಾಸಾ-1 ರವರು ತಯಾರಿಸಿರುತ್ತಾರೆ. ಮು.ಮಾ 1 ರಿಂದ 3 ಇಟ್ಟಿರುವ ಬಟ್ಟೆ ಮೇಲೆ ಬರೆದಿರುವ ಕೈಬರಹ ಚಾಸಾ-1 ರವರ ಕೈಬರಹ ಇರಬಹುದು. ಸದರಿ ಬಟ್ಟೆಯಿ ಮೇಲೆ ಚಾಸಾ-1 ರವರ ಕೈಬರಹ ಅಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಬಟ್ಟೆಯ ಮೇಲೆ ಯಾರು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

ನಾನು ಸ್ಥಳಕ್ಕೆ ಹೋಗದೇ ನನ್ನ ಮೇಲಾಧಿಕಾರಿಗಳ ಮಾತುಕೇಳಿ ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬೇರೆ ಪ್ರಕರಣಗಳಲ್ಲಿರುವ ಮು.ಮಾ. 1 ರಿಂದ 3 ಈ ಪ್ರಕರಣದಲ್ಲಿ ಸೇರಿಸಿ ಆರೋಪಿಗೆ ಸತಾಯಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಕಿ ಸಂಖ್ಯೆಗೋಸ್ಕರ ಆರೋಪಿಯ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಮು.ಮಾ. 1 ರಿಂದ 3 ವಸ್ತುಗಳಿಗೆ ಹಾಗೂ ಆರೋಪಿಗೆ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಆರೋಪಿಗೆ ದಸ್ತಗಿರಿ ಮಾಡಿದ್ದೀರಾ ಅಥವಾ ಆರೋಪಿ ಸ್ಥಳದಿಂದ ಓಡಿ ಹೋಗಿರುತ್ತಾನಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಅದು ಮೇಲಾಧಿಕಾರಿಗಳಿಗೆ ಗೊತ್ತಿದೆ ಎಂದು ನುಡಿಯುತ್ತಾರೆ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**